**ಸಾಲದಾತರಿಗೆ ನ್ಯಾಯೋಚಿತ ಅಭ್ಯಾಸಗಳ ಪಟ್ಟಿ**

| | |
|---|---|
| ಅನುಷ್ಠಾನಕ್ಕೆ ಬರುವ ದಿನಾಂಕ | ಫೆಬ್ರವರಿ 01, 2018 |
| ಅನುಮೋದಕರು | ಮಂಡಳಿ/ಮಂಡಳಿ ಸಮಿತಿ |
| ಅನುಮೋದಿಸಿದ ದಿನಾಂಕ | ಏಪ್ರಿಲ್ 28, 2022 |
| ನೀತಿ ರಚನೆ ಮಾಲಿಕರು | ರಾಷ್ಟ್ರೀಯ ವ್ಯವಸ್ಥಾಪಕರು–ಸೇವಾ ಗುಣಮಟ್ಟ |
| ಮರ್‌ಉಪರಿಶೀಲನೆ ಅವಧಿ | ಕನಿಷ್ಟ ವರ್ಷಕ್ಕೊಮ್ಮೆ |

**ಸಾಂಸ್ಥಿಕ ಕಚೇರಿ ವಿಳಾಸ:**
**ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಲಿ.**
**ಗ್ರೇಪ್ ಗಾರ್ಡನ್,ನಂ.27, 3ನೇ ಎ ಅಡ್ಡರಸ್ತೆ, 18ನೇ ಮುಖ್ಯ ರಸ್ತೆ**
**ಕೋರಮಂಗಲ 6ನೇ ಬ್ಲಾಕ್, ಬೆಂಗಳೂರು 560095**

**ಈ ದಾಖಲೆಯು ಕೇವಲ ಆಂತರಿಕ ಬಳಕೆಗೆ ಮಾತ್ರ ಉದ್ದೇಶಿಸಲಾಗಿದೆ ಮತ್ತು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಮ್ಕ್ ಲಿ.ನ ಅನುಮತಿ ಇಲ್ಲದೆ ಯಾವುದೇ ರೂಪದಲ್ಲಿ ಇದನ್ನು ಮರುಸೃಷ್ಟಿಸಲಾಗದು**

## ಉಜ್ಜೀವನ್ ಸಣ್ಣ ಹಣಕಾಸು ಬ್ಯಾಂಕ್‌ನ ಸಾಲದಾತರಿಗೆ ನ್ಯಾಯೋಚಿತ ಅಭ್ಯಾಸಗಳ ಸಂಹಿತೆ ("ನ್ಯಾಯೋಚಿತ ಅಭ್ಯಾಸ ಸಂಹಿತೆ"/"ಫೇರ್ ಪ್ರಾಕ್ಟೀಸ್ ಕೋಡ್")

ಉಜ್ಜೀವನ್ ಸಣ್ಣ ಹಣಕಾಸು ಬ್ಯಾಂಕ್(ಇನ್ನು ಮುಂದೆ 'ಬ್ಯಾಂಕ್' ಎಂದು ಹೇಳಲಾಗುತ್ತದೆ)ನ ನ್ಯಾಯೋಚಿತ ಅಭ್ಯಾಸಗಳ ಸಂಹಿತೆಯು ಬ್ಯಾಂಕ್‌ನ ಸಾಲದಾರರಿಗೆ ಬ್ಯಾಂಕ್‌ನೊಂದಿಗೆ ಅವರ ವ್ಯವಹಾರದಲ್ಲಿ ಪಾರದರ್ಶಕತೆ ಹಾಗೂ ಸ್ಪಷ್ಟತೆ ನೀಡುತ್ತದೆ. ಈ ಮಾರ್ಗಸೂಚಿಗಳು ಬ್ಯಾಂಕ್‌ನ ಆಂತರಿಕ ಬ್ಯಾಂಕಿಂಗ್ ವ್ಯವಹಾರಗಳಿಗೆ ಮಾತ್ರ ಸಂಬಂಧಪಟ್ಟಿರುತ್ತದೆ.

ಬ್ಯಾಂಕ್‌ನ ನಿಯಮ ಏನೆಂದರೆ ತನ್ನ ಎಲ್ಲ ಗ್ರಾಹಕರನ್ನು ನಿರಂತರವಾಗಿ ಮತ್ತು ನ್ಯಾಯೋಚಿತವಾಗಿ ನೋಡಿಕೊಳ್ಳುವುದು. ಬ್ಯಾಂಕ್‌ನ ಉದ್ಯೋಗಿಗಳು ನೆರವು, ಪ್ರೋತ್ಸಾಹ ಹಾಗೂ ಸೇವೆಯನ್ನು ನ್ಯಾಯೋಚಿತವಾಗಿ, ಸಮಾನವಾಗಿ ಮತ್ತು ನಿರಂತರವಾಗಿ ನೀಡುತ್ತಾರೆ. ನ್ಯಾಯೋಚಿತ ಅಭ್ಯಾಸ ಸಂಹಿತೆಯು ಬ್ಯಾಂಕ್‌ನ ಎಲ್ಲ ಗ್ರಾಹಕರಿಗೆ ಅದರ ಶಾಖೆಗಳಲ್ಲಿ ಮತ್ತು ವೆಬ್‌ಸೈಟ್, ಸಧ್ಯಕ್ಕೆತಿತಿತಿ.ಣುರಿಜುಚಿಟಿಜಿಬಿ.ಟಿ (ವೆಬ್‌ಸೈಟ್)ನಲ್ಲಿ ಸಿಗುತ್ತದೆ.

### ಸಮಾನತೆಯ ನೀತಿ

ತನ್ನ ಗ್ರಾಹಕರಲ್ಲಿ ಜನಾಂಗ, ಜಾತಿ, ಬಣ್ಣ, ಧರ್ಮ, ಲಿಂಗ, ವಿವಾಹಿತ/ಅವಿವಾಹಿತ, ವಯಸ್ಸು(ಪ್ರಬುದ್ಧ ವಯಸ್ಸಿಗಿಂತ ಮೇಲ್ಪಟ್ಟು), ಹಣಕಾಸು ಪರಿಸ್ಥಿತಿ ಅಥವಾ ದೈಹಿಕ ದೌರ್ಬಲ್ಯ, ಇವುಗಳ ಆಧಾರದ ಮೇಲೆ ಬ್ಯಾಂಕ್ ತಾರತಮ್ಯ ಮಾಡುವುದಿಲ್ಲ.

### ನೇರ ಮಾರಾಟ ಮಾಡುವ ಏಜೆಂಟರು(ಡಿಎಸ್‌ಎ)ಗಳಿಗೆ ನೀತಿ ಸಂಹಿತೆ

ಬ್ಯಾಂಕ್, ಡಿಎಸ್‌ಎಗಳಿಗೆ ಕೆಳಗೆ ಕೊಟ್ಟಿರುವ ನೀತಿ ಸಂಹಿತೆಯನ್ನು ಅಳವಡಿಸಿಕೊಳ್ಳುತ್ತದೆ ಮತ್ತು ಸಂಬಂಧಪಟ್ಟ ಡಿಎಸ್‌ಎ ಜೊತೆ ಒಪ್ಪಂದದಲ್ಲಿ ಸೇರಿಸುತ್ತದೆ. ಡಿಜಿಟಲ್ ಫಿನ್‌ಟೆಕ್ ಪಾರ್ಟ್ನರ್‌ಶಿಪ್‌ಗಳ ಮುಖಾಂತರ ಬ್ಯಾಂಕ್ ಸಾಲ ಕೊಡಲು ಮಾಡಿಕೊಂಡಿರುವ ವ್ಯವಸ್ಥೆಯನ್ನು ಕೂಡ ಡಿಎಸ್‌ಎ ಎಂದು ಕರೆಯಲ್ಪಡುವುದರಿಂದ, ಕೆಳಗಿನ ನೀತಿ ಸಂಹಿತೆಯು ಬ್ಯಾಂಕ್‌ನ ಡಿಜಿಟಲ್ ಲೆಂಡಿಂಗ್(ಸಾಲ ನೀಡುವ) ನಡೆಸಿಕೊಡುವ ಫಿನ್‌ಟೆಕ್ ಪಾರ್ಟ್ನರ್‌ಗಳಿಗೂ ಅನ್ವಯಿಸುತ್ತದೆ. ಸಧ್ಯದ ವ್ಯವಹಾರ ಮಾದರಿಗೆ ಸರಿಹೊಂದುವಂತೆ ಐಬಿಎ ತಯಾರಿಸಿರುವ ಮಾದರಿ ನೀತಿ ಸಂಹಿತೆಯನ್ನು ಬ್ಯಾಂಕ್ ಅಳವಡಿಸಿಕೊಂಡಿದೆ. ಯಾವಾಗ ಬ್ಯಾಂಕ್ ಬೇರೆ ಬಗೆಯ ವ್ಯವಹಾರ ಮಾದರಿ ಬಳಸುತ್ತದೆಯೋ ಆಗ ಅದಕ್ಕೆ ಹೊಂದುವಂತೆ ನೀತಿ ಸಂಹಿತೆಯಲ್ಲಿ ವಿಚಾರಗಳನ್ನು ಅಳವಡಿಸಿಕೊಳ್ಳುತ್ತದೆ.

- ಒಬ್ಬ ಸಂಭಾವ್ಯ ಗ್ರಾಹಕನನ್ನು ಬ್ಯಾಂಕ್‌ನ ಉತ್ಪನ್ನಗಳನ್ನು ಕೊಳ್ಳಲು ಕೆಳಗೆ ಹೇಳಿದ ಸಂದರ್ಭಗಳಲ್ಲಿ ಮಾತ್ರ ಸಂಪರ್ಕಿಸಬೇಕು:
    - ಯಾವಾಗ ಒಬ್ಬ ಸಂಭಾವ್ಯ ಗ್ರಾಹಕನು ಬ್ಯಾಂಕ್‌ನ ಉತ್ಪನ್ನಗಳನ್ನು ಪಡೆಯಬೇಕೆಂಬ ಇಚ್ಛೆಯನ್ನು ವೆಬ್‌ಸೈಟ್ ಅಥವಾ ಬ್ಯಾಂಕ್‌ನ ಕಾಲ್ ಸೆಂಟರ್ ಅಥವಾ ಬ್ಯಾಂಕ್‌ನ ಯಾವುದಾದರೂ ಶಾಖೆಯಲ್ಲಿ ಅಥವಾ ಬ್ಯಾಂಕ್‌ನ ರಿಲೇಶನ್‌ಶಿಪ್ ಮ್ಯಾನೇಜರ್ ಮುಖಾಂತರ ಅಥವಾ ಇನ್ನೊಬ್ಬ ಸಂಭಾವ್ಯ

ಗ್ರಾಹಕ ಅಥವಾ ಈಗಿರುವ ಗ್ರಾಹಕರು ಹೇಳಿದ್ದಲ್ಲಿ ಅಥವಾ ಈಗಿರುವ 'ಗ್ರಾಹಕರೇ ಬ್ಯಾಂಕ್‌ನ ಬೇರೆ ಉತ್ಪನ್ನಗಳ ಬಗ್ಗೆ ಬ್ಯಾಂಕ್‌ನಿಂದ/ಬ್ಯಾಂಕ್‌ನ ಪರವಾಗಿ ಕರೆಯನ್ನು ಸ್ವೀಕರಿಸಲು ಒಪ್ಪಿಗೆ ಸೂಚಿಸಿದ್ದಲ್ಲಿ.

- ಯಾವಾಗ ಸಂಭಾವ್ಯ ಗ್ರಾಹಕರ' ಹೆಸರು/ದೂರವಾಣಿ ಸಂಖ್ಯೆ/ವಿಳಾಸ ಬ್ಯಾಂಕ್‌ನಲ್ಲಿ ಲಭ್ಯವಿದ್ದು, ಅದನ್ನು ಸಂಭಾವ್ಯ ಗ್ರಾಹಕರ ಅನುಮತಿ ಪಡೆದು ಯಾವುದಾದರೊಂದು ಪಟ್ಟಿಯಿಂದ/ಡಿರೆಕ್ಟರಿಯಿಂದ ಅಥವಾ ಡಿಎಸ್‌ಎ ಮ್ಯಾನೇಜರ್/ಟೀಮ್ ಮ್ಯಾನೇಜರ್ ಅನುಮೋದಿಸಿದ ಡಾಟಾಬೇಸ್‌ನಿಂದ ಪಡೆದಿದ್ದರೆ.
- ಯಾವಾಗ ಸಂಭಾವ್ಯ ಗ್ರಾಹಕ /ಗ್ರಾಹಕ ತಾನೇ ಖುದ್ದಾಗಿ ಫಿನ್‌ಟೆಕ್ ಅನ್ನು ಅವರ (ಸ್ವಾಧೀನತೆಯ ತಂತ್ರ) ಅಕ್ವಿಸಿಶನ್ ಸ್ಟ್ರಾಟೆಜಿ ಅಥವಾ ಮಾದರಿಯ ಅಂಗವಾದ ಆಪ್, ವೆಬ್‌ಸೈಟ್, ಪ್ರತ್ಯಕ್ಷವಾಗಿ, ಸಂಪರ್ಕ ಕೇಂದ್ರ ಅಥವಾ ಈ ಬಗೆಯ ಯಾವುದಾದರು ಸಂಪರ್ಕ ಕೇಂದ್ರಗಳಿಗೆ ಹೋದರೆ.

- ಡಿಎಸ್‌ಎ ಬಳಿ ಇರುವ "ಡು ನಾಟ್ ಡಿಸ್ಟರ್ಬ್" ಪಟ್ಟಿಯಲ್ಲಿ ಯಾವುದೇ ವ್ಯಕ್ತಿ ಅಥವಾ ಘಟಕಗಳ ಹೆಸರು/ನಂಬರ್ ಕಂಡುಬಂದರೆ, ಡಿಎಸ್‌ಎ ಅವರಿಗೆ ಕರೆ ಮಾಡಬಾರದು.ಫೋನ್ ಸಂಪರ್ಕ ಸಾಮಾನ್ಯವಾಗಿ 09:30 ಗಂಟೆಯಿಂದ 19:00 ಗಂಟೆವರೆಗೆ ಸೀಮಿತವಾಗಿರಬೇಕು. ಆದರೂ, ಸಂಭಾವ್ಯ ಗ್ರಾಹಕನಿ/ಳಿಗೆ ಫೋನ್ ಕರೆಯಿಂದ 'ಯಾವುದೇ ತೊಂದರೆ ಆಗುತ್ತಿಲ್ಲ ಎಂದು ತಿಳಿದುಕೊಳ್ಳುವುದು ಉತ್ತಮ. ಮೇಲೆ ತಿಳಿಸಿದ ಸಮಯಕ್ಕಿಂತ ಮೊದಲು ಅಥವಾ ನಂತರ ಕರೆ ಮಾಡಬೇಕೆಂದರೆ, ಅದಕ್ಕೆ ಡಿಎಸ್‌ಎ ಲಿಖಿತವಾಗಿ ಅಥವಾ ಮೌಖಿಕವಾಗಿ ಒಪ್ಪಿಗೆ ನೀಡಿರಬೇಕು.

- ಡಿಎಸ್‌ಎ ನಿರೀಕ್ಷಕನಗೌಪ್ಯತೆಯನ್ನುಗೌರವಿಸಬೇಕು. ನಿರೀಕ್ಷಕನಆಸಕ್ತಿಯನ್ನು ಸಾಮಾನ್ಯವಾಗಿ ಅವನ ಜೊತೆ ಮಾತ್ರಚರ್ಚಿಸಬೇಕು ಮತ್ತು ನಿರೀಕ್ಷಕಅಧಿಕಾರ ನೀಡಿದಅಕೌಂಟಂಟ್/ಸೆಕ್ರೆಟರಿ/ಜೀವನ ಸಂಗಾತಿ(ಗಂಡಅಥವಾ ಹೆಂಡತಿ) ಮುಂತಾದ ವ್ಯಕ್ತಿ/ಕುಟುಂಬದ ಸದಸ್ಯರೊಡನೆ ಮಾತ್ರಚರ್ಚೆ ಮಾಡಬೇಕು.

- ಡಿಎಸ್‌ಎ ಸಂಭಾವ್ಯ ಗ್ರಾಹಕನಿಂದ ಯಾವುದೇ ಬಗೆಯ ಲಂಚವನ್ನು ತೆಗೆದುಕೊಳ್ಳಬಾರದು. ಗ್ರಾಹಕರು ಬಿಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯುಟಿವ್‌ಗೆ ಲಂಚ ಅಥವಾ ಯಾವುದೇ ರೀತಿಯ ಪಾವತಿಯನ್ನು ಕೊಡಲು ಮುಂದೆ ಬಂದರೆ, ಆ ಕೊಡುಗೆ ಬಗ್ಗೆ ಅವನು/ಅವಳು ಆಡಳಿತವರ್ಗಕ್ಕೆ ವರದಿ ಮಾಡಬೇಕು.

- ಡಿಎಸ್‌ಎ ಬ್ಯಾಂಕ್‌ನ ಪರವಾಗಿ ಸಾಲಗಾರರ ಜೊತೆ ಸಂವಹನ ನಡೆಸುತ್ತಿದ್ದಾರೆ ಮತ್ತು ಅವರಿಗೆ ಯಾವುದೇ ಸಾಲ ಕೊಟ್ಟಲ್ಲಿ ಅದು ಬ್ಯಾಂಕ್ ಕೊಟ್ಟಿರುತ್ತದೆ ಎಂದು ಮುಂಚಿತವಾಗಿ ತಿಳಿಸಿರಬೇಕು.

- ಬ್ಯಾಂಕ್‌ನ ಬಾಕಿ ಹಣವನ್ನು ಹಿಂಪಡೆಯುವ ಕೆಲಸಕ್ಕೆ ನಿಯುಕ್ತರಾದ ಡಿಎಸ್‌ಎಗಳಿಗೆ, ಬಾಕಿ ನೀಡದ ಗ್ರಾಹಕರ ಜೊತೆ ವ್ಯವಹರಿಸುವ ರೀತಿಯ ಬಗ್ಗೆ ತರಬೇತಿ ನೀಡಲು ಆಂತರಿಕ ನೀತಿ ಹಾಗೂ ವಿಧಾನಗಳಿರಬೇಕು. ಮತ್ತು ಅವರು ಗ್ರಾಹಕರ ಜೊತೆ ಹೆಚ್ಚು ಗೌರವದಿಂದ ವ್ಯವಹಾರ ಮಾಡುವಂತೆ ಎಚ್ಚರ ವಹಿಸಬೇಕು.

- ಸಾಲದ ಅರ್ಜಿ ಪರಿಶೀಲಿಸುವ ಸಿಬ್ಬಂದಿ/ಏಜೆಂಟರು, ಬಾಕಿ ಹಣ ವಸೂಲಿ ಮಾಡುವವರು ಮತ್ತು ಹಣಪಾವತಿಯಲ್ಲಿ ವಿಳಂಬ ಮಾಡುವ ಗ್ರಾಹಕರೊಂದಿಗೆ ವ್ಯವಹರಿಸುವವರು, ಉದ್ಯೋಗಕ್ಕೆ ಸೇರಿಕೊಳ್ಳುವಾಗ

ಕೈಗೊಳ್ಳುವ ಔಪಚಾರಿಕತೆಗಳ ಸಮಯದಲ್ಲಿ ಅಥವಾ ಪ್ರತ್ಯೇಕವಾಗಿ, ಡಿ ಎಸ್ ಎ ಸೂಚಿಸಿರುವ ನಡವಳಿಕೆ ಸಂಹಿತೆಗೆ(ಐ ಬಿ ಎ ನ ನಡವಳಿಕೆ ಸಂಹಿತೆಯಂತಹುದು) ಬದ್ಧವಾಗಿ ನಡೆದುಕೊಳ್ಳುವಂತೆ ಘೋಷಣೆಪತ್ರಕ್ಕೆ ಸಹಿ ಮಾಡಬೇಕು.

- _

**ಡಿಜಿಟಲ್ ಲೆಂಡಿಂಗ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಬ್ಯಾಂಕ್‌ಗಳಿಂದ ಪಡೆದ ಸಾಲಗಳು:**

ಆರ್‌ಬಿಐ ಸುತ್ತೋಲೆಯನ್ನು ಉಲ್ಲೇಖದ ಅನುಸಾರ – ಡಿಜಿಟಲ್ ಲೆಂಡಿಂಗ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಬ್ಯಾಂಕ್‌ಗಳು ಮತ್ತು ಓಃಈಅ ಗಳಿಂದ ಪಡೆದ ಸಾಲಗಳು: 24 ಜೂನ್ 2020 ರ ನ್ಯಾಯಯುತ ಅಭ್ಯಾಸಗಳ ಕೋಡ್ ಮತ್ತು ಹೊರಗುತ್ತಿಗೆ ಮಾರ್ಗಸೂಚಿಗಳ ಅನುಸರಣೆಗಳ ಅನುಸಾರ, ಬ್ಯಾಂಕ್, ಸ್ವಂತ ಡಿಜಿಟಲ್ ಲೆಂಡಿಂಗ್ ಪ್ಲಾಟ್‌ಫಾರ್ಮ್ ಮೂಲಕ ಅಥವಾ ಹೊರಗುತ್ತಿಗೆಯ ಲೆಂಡಿಂಗ್ ಪ್ಲಾಟ್‌ಫಾರ್ಮ್ ಮೂಲಕವೇ ಸಾಲವನ್ನು ನೀಡಲಿ, ಅವುಗಳು ಅಕ್ಷರಶ: ಮತ್ತು  ಉದ್ದೇಶಾನುಸಾರ ನ್ಯಾಯಯುತ ಅಭ್ಯಾಸಗಳ ಕೋಡ್ ಮಾರ್ಗಸೂಚಿಗಳಿಗೆ ಬದ್ಧವಾಗಿರಬೇಕು ಮತ್ತು ಹಣಕಾಸು ಸೇವೆಗಳು ಮತ್ತು ಐಟಿ ಸೇವೆಗಳ ಹೊರಗುತ್ತಿಗೆ ಮೇಲಿನ ನಿಯಂತ್ರಕ ಸೂಚನೆಗಳನ್ನು ಸಹ ನಿಖರವಾಗಿ ಅನುಸರಿಸಬೇಕು.

ಬ್ಯಾಂಕ್ ಡಿಜಿಟಲ್ ಲೆಂಡಿಂಗ್ ಪ್ಲಾಟ್‌ಫಾರ್ಮ್ ಗಳನ್ನು ತನ್ನ ಏಜೆಂಟ್‌ಗಳಾಗಿ ಸಾಲಗಾರರಿಗೆ ಸಾಲ ನೀಡಲು ಮತ್ತು/ಅಥವಾ ಬಾಕಿಗಳನ್ನು ಮರುಪಡೆಯಲು ತೊಡಗಿಸಿಕೊಂಡಲ್ಲೆಲ್ಲಾ, ಅವರು ಈ ಕೆಳಗಿನ ಸೂಚನೆಗಳನ್ನು ಅನುಸರಿಸಬೇಕು:

ಎ) ಏಜೆಂಟರನ್ನಾಗಿ ತೊಡಗಿಸಿಕೊಂಡಿರುವ ಡಿಜಿಟಲ್ ಲೆಂಡಿಂಗ್ ಪ್ಲಾಟ್‌ಫಾರ್ಮ್‌ಗಳ ಹೆಸರುಗಳನ್ನು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಬಹಿರಂಗಪಡಿಸಬೇಕು.

ಬಿ) ಏಜೆಂಟರಾಗಿ ತೊಡಗಿಸಿಕೊಂಡಿರುವ ಡಿಜಿಟಲ್ ಲೆಂಡಿಂಗ್ ಪ್ಲಾಟ್‌ಫಾರ್ಮ್‌ಗಳು, ತಾವು ಯಾವ ಬ್ಯಾಂಕ್‌ನ ಪರವಾಗಿ ಸಂವಹನ ನಡೆಸುತ್ತಿರುವರೋ ಆ ಬ್ಯಾಂಕ್‌ನ ಹೆಸರನ್ನು ಗ್ರಾಹಕರಿಗೆ ಮುಂಚಿತವಾಗಿ ಬಹಿರಂಗಪಡಿಸಲು ನಿರ್ದೇಶಿಸುವುದು.

ಸಿ) ಮಂಜೂರಾದ ತಕ್ಷಣ ಆದರೆ ಸಾಲದ ಒಪ್ಪಂದವನ್ನು ಕಾರ್ಯಗತಗೊಳಿಸುವ ಮೊದಲು, ಬ್ಯಾಂಕ್‌ನ ಲೆಟರ್ ಹೆಡ್‌ನಲ್ಲಿ ಸಾಲಗಾರನಿಗೆ ಮಂಜೂರಾತಿ ಪತ್ರವನ್ನು ನೀಡುವುದು.

ಡಿ) ಸಾಲದ ಒಪ್ಪಂದದಲ್ಲಿ ಉಲ್ಲೇಖಿಸಲಾದ ಎಲ್ಲಾ ಲಗತ್ತುಗಳ ಪ್ರತಿಗಳ ಸಹಿತವಾಗಿ ಸಾಲದ ಒಪ್ಪಂದದ ಪ್ರತಿಯನ್ನು ಸಾಲಗಳ ಮಂಜೂರಾತಿ / ವಿತರಣೆಯ ಸಮಯದಲ್ಲಿ ಎಲ್ಲಾ ಸಾಲಗಾರರಿಗೆ ಒದಗಿಸುವುದು.

ಇ) ಬ್ಯಾಂಕ್ ತೊಡಗಿಸಿಕೊಂಡಿರುವ ಡಿಜಿಟಲ್ ಲೆಂಡಿಂಗ್ ಪ್ಲಾಟ್‌ಫಾರ್ಮ್‌ಗಳ ಮೇಲೆ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ನಿರ್ವಹಣೆಯನ್ನು ಖಾತ್ರಿಪಡಿಸುವುದು.

ಎಫ್) ಕುಂದುಕೊರತೆ ಪರಿಹಾರ ಕಾರ್ಯವಿಧಾನದ ಬಗ್ಗೆ ಅರಿವು ಮೂಡಿಸಲು ನ್ಯಾಯೋಚಿತ ಪ್ರಯತ್ನಗಳನ್ನು ಮಾಡುವುದು.

## ಸಾಲದ ಅರ್ಜಿ ಮತ್ತು ಒಪ್ಪಂದ

ಸಾಲಗಾರನು ಕೋರಿದ ಸಾಲದ ಮೊತ್ತವನ್ನು ಲೆಕ್ಕಿಸದೆ ಎಲ್ಲಾ ವರ್ಗದ ಸಾಲಗಳಿಗೆ ಸಂಬಂಧಿಸಿದಂತೆ ಸಾಲದ ಅರ್ಜಿ ನಮೂನೆಗಳು ಸಮಗ್ರವಾಗಿವೆ ಎಂದು ಬ್ಯಾಂಕ್ ಖಚಿತಪಡಿಸತಕ್ಕದ್ದು. ಎಲ್ಲಾ ರೀತಿಯಲ್ಲೂ ಸಂಪೂರ್ಣ ಅರ್ಜಿಯನ್ನು ಸಲ್ಲಿಸಲು ಗ್ರಾಹಕರಿಗೆ ಅನುವು ಮಾಡಿಕೊಡಲು ಸಾಲದ ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪರಿಶೀಲನಾಪಟ್ಟಿಯನ್ನು ಬ್ಯಾಂಕ್ ಒದಗಿಸತಕ್ಕದ್ದು (ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳಿಗೆ ಅನುಗುಣವಾಗಿ).

ಒಂದು ವೇಳೆ ಬ್ಯಾಂಕ್ ದೂರವಾಣಿ ಮೂಲಕ ಕ್ರೆಡಿಟ್ ಸೌಲಭ್ಯವನ್ನು ನೀಡಿದರೆ/ ಅನುಮೋದಿಸಿದರೆ, ಬ್ಯಾಂಕ್ ಗ್ರಾಹಕರ ಒಪ್ಪಿಗೆಯನ್ನು ಲಿಖಿತವಾಗಿ ಸ್ವೀಕರಿಸಿದ ನಂತರ ಅಥವಾ ದೃಢೀಕೃತ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ / ಅಗತ್ಯ ದೃಢೀಕರಣದ ನಂತರ ಅವರ ಒಪ್ಪಿಗೆಯನ್ನು ಪಡೆದ ನಂತರವೇ  ಗ್ರಾಹಕರ ಖಾತೆಗೆ ಮೊತ್ತವನ್ನು ಕ್ರೆಡಿಟ್ ಮಾಡತಕ್ಕದ್ದು. ಬ್ಯಾಂಕ್ ಯಾವುದೇ ರೂಪದಲ್ಲಿ ಯಾವುದೇ ಅನಪೇಕ್ಷಿತ ಪೂರ್ವ–ಅನುಮೋದಿತ ಕ್ರೆಡಿಟ್ ಸೌಲಭ್ಯವನ್ನು ನೀಡುವುದಿಲ್ಲ.

ಸಾಲದ ಅರ್ಜಿಯ ಪ್ರಕ್ರಿಯೆಗಾಗಿನ ಸಮಯಾವಧಿಯನ್ನು ಸ್ಪಷ್ಟವಾಗಿ ನಮೂದಿಸುವುದರ ಜೊತೆಗೆ ಪಡೆದ ಎಲ್ಲಾ ಸಾಲದ ಅರ್ಜಿಗಳಿಗೆ ಸ್ವೀಕೃತಿಯನ್ನು ನೀಡುವ ವ್ಯವಸ್ಥೆಯನ್ನು ಬ್ಯಾಂಕ್ ಹೊಂದಿರತಕ್ಕದ್ದು.

## ಸಾಲದ ಮತ್ತು ಸಾಲಗಾರನ ಅರ್ಹತೆಯ ಮೌಲ್ಯಮಾಪನ

ಬ್ಯಾಂಕ್ ಸಾಲಗಾರರ ಕ್ರೆಡಿಟ್ ಅರ್ಜಿಯ ಸರಿಯಾದ ಮೌಲ್ಯಮಾಪನವನ್ನು ನಡೆಸತಕ್ಕದ್ದು ಮತ್ತು ಸಾಲಗಾರನ ಸಾಲದ ಅರ್ಹತೆಯ ಬಗ್ಗೆ ಸಮಂಜಸ ಕ್ರಮಗಳಿಗೆ ಬದಲಿಯಾಗಿ ಮಾರ್ಜಿನ್ ಮತ್ತು ಭದ್ರತಾ ಷರತ್ತುಗಳನ್ನಷ್ಟೇ ಬಳಸಬಾರದು. ಅನ್ವಯಿಸುವ ನಿಯಮಗಳು ಮತ್ತು ಷರತ್ತುಗಳ ಸಹಿತವಾಗಿ ಸಾಲಗಾರನಿಗೆ ಸಾಲದ ಮಿತಿಯನ್ನು ಬ್ಯಾಂಕ್ ತಿಳಿಸತಕ್ಕದ್ದು. ಸಾಲಗಾರನೊಂದಿಗಿನ ಚರ್ಚೆಯ ನಂತರ ಬ್ಯಾಂಕ್ ನೀಡುವ ಸಾಲದ ಸೌಲಭ್ಯಗಳನ್ನು ನಿಯಂತ್ರಿಸುವ ನಿಯಮಗಳು ಮತ್ತು ಷರತ್ತುಗಳು ಮತ್ತು ಇತರ ಎಚ್ಚರಿಕೆಗಳನ್ನು ಬರವಣಿಗೆಯ ರೂಪಕ್ಕೆ ತರುವುದು ಮತ್ತು ಬ್ಯಾಂಕ್‌ನ ಅಧಿಕೃತ ಅಧಿಕಾರಿಯಿಂದ ಸರಿಯಾಗಿ ಪ್ರಮಾಣೀಕರಿಸತಕ್ಕದ್ದು. ಈ ನಿಯಮಗಳು ಮತ್ತು ಷರತ್ತುಗಳ ಕುರಿತ ಸಂಪೂರ್ಣ ಮಾಹಿತಿಯೊಂದಿಗೆ ನೀಡಲಾದ ಸಾಲಗಾರನ ಅಂಗೀಕಾರವನ್ನು ಬ್ಯಾಂಕ್ ತನ್ನ ದಾಖಲೆಗಳಲ್ಲಿ ಇರಿಸಿಕೊಳ್ಳತಕ್ಕದ್ದು.

ಒಕ್ಕೂಟದ ಏರ್ಪಾಡಿನ ಅಡಿಯಲ್ಲಿ ಸಾಲ ನೀಡುವ ಸಂದರ್ಭದಲ್ಲಿ, ಭಾಗವಹಿಸುವ ಸಾಲದಾತರು ಕಾರ್ಯಸಾಧ್ಯವಾದ ಮಟ್ಟಿಗೆ ಕಾಲಮಿತಿಯಲ್ಲಿ ಪ್ರಸ್ತಾವನೆಗಳ ಮೌಲ್ಯಮಾಪನವನ್ನು ಪೂರ್ಣಗೊಳಿಸಲು ಕಾರ್ಯವಿಧಾನಗಳನ್ನು ಸಿದ್ಧಪಡಿಸಬೇಕು ಮತ್ತು ಸಾಲ ನೀಡುವ ಅಥವಾ ನೀಡದಿರುವ ಕುರಿತ ಅವರ ನಿರ್ಧಾರಗಳನ್ನು ಸೂಕ್ತ ಸಮಯದೊಳಗೆ ತಿಳಿಸಬೇಕು.

## ಸಾಲದ ಅರ್ಜಿಗಳಿಗೆ ಸಂಬಂಧಿಸಿದಂತೆ CICಗಳೊಂದಿಗೆ ಮಾಹಿತಿ ವಿನಿಮಯ

ಕ್ರೆಡಿಟ್ ಮಾಹಿತಿ ಕಂಪನಿಗಳ (ಅಖಅ ಗಳು) ಪಾತ್ರ,  ಅಖಅ ಗಳೊಂದಿಗೆ ಕೈಗೊಂಡ ಪರಿಶೀಲನೆಗಳು ಮತ್ತು ಅಖಅ ಒದಗಿಸುವ ಮಾಹಿತಿಯು ಗ್ರಾಹಕರ ಕ್ರೆಡಿಟ್ ಪಡೆಯುವ ಸಾಮರ್ಥ್ಯದ ಮೇಲೆ ಬೀರಬಹುದಾದ ಪರಿಣಾಮಗಳನ್ನು ಗ್ರಾಹಕರಿಗೆ ಬ್ಯಾಂಕ್ ವಿವರಿಸತಕ್ಕದ್ದು.

ಗ್ರಾಹಕರ ಕೋರಿಕೆಯ ಮೇರೆಗೆ, ನಿಗದಿತ ಶುಲ್ಕವನ್ನು ಪಾವತಿಸಿದ ನಂತರ, ಬ್ಯಾಂಕ್ ಅಖಅ ಯಿಂದ ಪಡೆದ ಕ್ರೆಡಿಟ್ ಮಾಹಿತಿ ವರದಿಯ ಪ್ರತಿಯನ್ನು ಒದಗಿಸಬಹುದು.

ಮರುಪಾವತಿಯಲ್ಲಿನ ಯಾವುದೇ ವೈಫಲ್ಯಗಳ ಕುರಿತ ಗ್ರಾಹಕರು ಪಡೆದ ಸಾಲದ ಬಗೆಗಿನ ಮಾಹಿತಿಯನ್ನು ಬ್ಯಾಂಕ್ ನಿಯತಕಾಲಿಕವಾಗಿ ಅಖಅ ಗೆ ಒದಗಿಸತಕ್ಕದ್ದು ಮತ್ತು ತದನಂತರದ ವರದಿಯಲ್ಲಿ ಸಾಲದ ಖಾತೆಯ ಕ್ರಮಬದ್ಧಗೊಳಿಸುವಿಕೆಯನ್ನು ನವೀಕರಿಸತಕ್ಕದ್ದು.

**ಕ್ರೆಡಿಟ್ ನಿರ್ಧಾರಗಳಿಗಾಗಿ ಟೈಮ್‌ಲೈನ್‌ಗಳು**

ಸಾಲದ ಪ್ರಸ್ತಾವನೆಗಳನ್ನು ವಿಲೇವಾರಿ ಮಾಡಲು ಬ್ಯಾಂಕ್  ಸೂಕ್ತವಾದ ಟೈಮ್‌ಲೈನ್‌ಗಳೊಂದಿಗೆ (ರೂ.20 ಲಕ್ಷದವರೆಗಿನ ಸಾಲಕ್ಕಾಗಿ ಸಾಲದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ 30 ಕೆಲಸದ ದಿನಗಳು) ನಿರ್ದಿಷ್ಟವಾದ ಕಾರ್ಯವಿಧಾನವನ್ನು ಹೊಂದಿರುವುದು, ಮತ್ತು ನಿಗದಿತ ಅವಧಿಗೂ ಮೀರಿ ಬಾಕಿ ಇರುವ ಅರ್ಜಿಗಳನ್ನು ಪರಿಶೀಲಿಸಲು ಸೂಕ್ತವಾದ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಸ್ಥಾಪಿಸತಕ್ಕದ್ದು. ಬ್ಯಾಂಕ್ ತನ್ನ ವೆಬ್‌ಸೈಟ್‌ಗಳು, ನೋಟಿಸ್–ಬೋರ್ಡ್‌ಗಳು, ಉತ್ಪನ್ನ ಪತ್ರಗಳು ಮತ್ತು ಇತರ ವಿಧಾನಗಳ ಮೂಲಕ ಕ್ರೆಡಿಟ್ ನಿರ್ಧಾರಗಳನ್ನು ತಿಳಿಸಲು ಟೈಮ್‌ಲೈನ್‌ಗಳಲ್ಲಿ ಸೂಕ್ತ ಪ್ರಕಟಣೆಗಳನ್ನು ಮಾಡುವುದು.

ಬ್ಯಾಂಕ್ ಸಾಲದ ಅರ್ಜಿಗಳನ್ನು ನ್ಯಾಯೋಚಿತ ಅವಧಿಯೊಳಗೆ ಪರಿಶೀಲಿಸತಕ್ಕದ್ದು ಮತ್ತು ಹೆಚ್ಚುವರಿ ವಿವರಗಳು/ದಾಖಲೆಗಳ ಅಗತ್ಯವಿದ್ದಲ್ಲಿ ತಕ್ಷಣವೇ ಸಾಲಗಾರರಿಗೆ ತಿಳಿಸತಕ್ಕದ್ದು.

ಯಾವುದೇ ಸಾಲಗಳನ್ನು ನಿರಾಕರಿಸಿದ ಸಂದರ್ಭದಲ್ಲಿ, ಸಾಲದ ಅರ್ಜಿಗಳನ್ನು ನಿರಾಕರಣದ ಮುಖ್ಯ ಕಾರಣ/ಕಾರಣಗಳನ್ನು ಋಒಖ ಅಥವಾ ಪತ್ರದ ಮೂಲಕ ನಿಗದಿತ ಸಮಯದೊಳಗೆ ಬ್ಯಾಂಕ್ ಲಿಖಿತರೂಪದಲ್ಲಿ ತಿಳಿಸತಕ್ಕದ್ದು. ಫಿನ್‌ಟೆಕ್ ಆಧಾರಿತ ಡಿಜಿಟಲ್ ಸಾಲದ ಸಂದರ್ಭದಲ್ಲಿ, ನಿರಾಕರಣೆಯ ಕಾರಣ/ಗಳನ್ನು ಬ್ಯಾಂಕ್ ಅಥವಾ ಫಿನ್‌ಟೆಕ್ ಲೆಂಡರ್ ನಡುವೆ ಪರಸ್ಪರ ನಿರ್ಧರಿಸಿದಂತೆ ನೇರವಾಗಿ ಬ್ಯಾಂಕ್ ಅಥವಾ ಫಿನ್‌ಟೆಕ್ ಲೆಂಡರ್‌ನ ಮುಖಾಂತರ ಗ್ರಾಹಕರಿಗೆ ತಿಳಿಸಬಹುದು.

**ಸಾಲ ಮಂಜೂರಾತಿಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ**

ಸಾಲಗಾರನಿಂದ ಯಾವುದೇ ಸಾಲಕ್ಕೆ ಭದ್ರತೆ/ ಮೇಲಾಧಾರವಾಗಿ ತೆಗೆದುಕೊಂಡ ಎಲ್ಲಾ ದಾಖಲೆಗಳಿಗೆ ಬ್ಯಾಂಕ್ ಲಿಖಿತ ರಸೀದಿಯನ್ನು ನೀಡುವುದು. ಕೃಷಿ ಸಾಲಗಳಿಗೆ ರೂ.1.6 ಲಕ್ಷದವರೆಗಿನ ಸಾಲದ ಮಿತಿಗಳಿಗೆ ಮೇಲಾಧಾರ ಭದ್ರತೆಯನ್ನು ಬ್ಯಾಂಕ್ ಒತ್ತಾಯಿಸುವುದಿಲ್ಲ ಮತ್ತು ಒಖಿಇ ವಲಯದ ಘಟಕಗಳಿಗೆ ರೂ.10 ಲಕ್ಷದವರೆಗಿನ ಸಾಲಗಳ ಸಂದರ್ಭದಲ್ಲಿ ಬ್ಯಾಂಕ್ ಮೇಲಾಧಾರ ಭದ್ರತೆಯನ್ನು ಸ್ವೀಕರಿಸುವುದಿಲ್ಲ. ಬ್ಯಾಂಕ್ ಮರುಪಾವತಿ ವೇಳಾಪಟ್ಟಿಯನ್ನು, ಅಂದರೆ,  ಸಾಲಗಳ ಮಂಜೂರಾತಿ ಸಮಯದಲ್ಲಿ ಮರುಪಾವತಿಯ ಮೊತ್ತ, ಕಾಲಾವಧಿ ಮತ್ತು ಆವರ್ತಕತೆಗಳನ್ನು ವಿವರಿಸತಕ್ಕದ್ದು ಮತ್ತು ಬಾಕಿಗಳನ್ನು ಸಂಗ್ರಹಿಸಲು ಒಂದು ನಿರ್ದಿಷ್ಟ ಪ್ರಕ್ರಿಯೆಯನ್ನು ಹೊಂದಿರುವುದು. ಬ್ಯಾಂಕ್ ಗ್ರಾಹಕರಿಗೆ ಸ್ಥಿರವಾದ ಸಮಾನ ನಿಯತಕಾಲಿಕ ಕಂತುಗಳನ್ನು (ಇಊಋ ಗಳು) ಮತ್ತು ಬದಲಾದ ಕಾಲಾವಧಿ ಅಥವಾ ಬಡ್ಡಿದರ ಬದಲಾದಾಗ ವ್ಯತಿರಿಕ್ತ ಅವಕಾಶಗಳ ಆಯ್ಕೆಯನ್ನು ನೀಡುವುದು. ಸಾಲಗಳ ಮೇಲಿನ ಬಡ್ಡಿಯನ್ನು ಲೆಕ್ಕ ಹಾಕುವ ವಿಧಾನವನ್ನು ಬ್ಯಾಂಕ್ ವಿವರಿಸತಕ್ಕದ್ದು.

ಸಾಲಗಾರನಿಗೆ ಬ್ಯಾಂಕ್ ಸಾಲದ ಒಪ್ಪಂದದಲ್ಲಿ ಉಲ್ಲೇಖಿಸಲಾದ ಎಲ್ಲಾ ಲಗತ್ತುಗಳ ಪ್ರತಿಗಳ ಸಹಿತವಾಗಿ ಸಾಲದ ಒಪ್ಪಂದದ ಪ್ರತಿಯನ್ನು ಸಾಲ ಮಂಜೂರಾತಿ / ವಿತರಣೆಯ ಸಮಯದಲ್ಲಿ ಒದಗಿಸತಕ್ಕದ್ದು. ವ್ಯವಹಾರದಲ್ಲಿನ ಅಭಿವೃದ್ಧಿಯ ಕಾರಣದಿಂದಾಗಿ ಸಾಲಗಾರರ ಮುಂದಿನ ಸಾಲದ ಅವಶ್ಯಕತೆಗಳನ್ನು ಪೂರೈಸುವ ಯಾವುದೇ ಬಾಧ್ಯತೆ ಇಲ್ಲದೆ ಸಾಲದ ಸೌಲಭ್ಯಗಳು ಕೇವಲ ಬ್ಯಾಂಕಿನ ವಿವೇಚನೆಗೆ ಅನುಗುಣವಾಗಿರುತ್ತವೆ ಎಂದು ಸಾಲ ಒಪ್ಪಂದವು ಸ್ಪಷ್ಟವಾಗಿ ನಿಗದಿಪಡಿಸತಕ್ಕದ್ದು. ಗ್ರಾಹಕರು ಮತ್ತು ಉಜ್ಜೀವನ್ ಬ್ಯಾಂಕ್ ಸಾಲದ ಒಪ್ಪಂದಗಳಿಗೆ ಸಹಿ ಮಾಡಲು ಬ್ಯಾಂಕ್ ಡಿಜಿಟಲ್ ಸಹಿ ಸೌಲಭ್ಯವನ್ನು ಬಳಸಬಹುದು. ಇದಕ್ಕೆ ವಿನಾಯಿತಿಗಳನ್ನು ಸರಿಯಾದ ಸಮರ್ಥನೆಯೊಂದಿಗೆ ದಾಖಲಿಸಬೇಕು. ಗ್ರಾಹಕರು ವಿನಂತಿಸಿದರೆ ಬ್ಯಾಂಕ್ ಸಾಲದ ಖಾತೆಯ ವಾರ್ಷಿಕ ಹೇಳಿಕೆಯನ್ನು ಗ್ರಾಹಕರಿಗೆ ಒದಗಿಸತಕ್ಕದ್ದು.

ಸಾಲ ಮಂಜೂರಾತಿ ದಾಖಲೆಗಳ ನಿಯಮಗಳು ಮತ್ತು ಷರತ್ತುಗಳನ್ನು ಹೊರತುಪಡಿಸಿ ಸಾಲಗಾರರ ವ್ಯವಹಾರಗಳಲ್ಲಿ ಬ್ಯಾಂಕ್ ಮಧ್ಯಪ್ರವೇಶಿಸುವುದಿಲ್ಲ (ಸಾಲಗಾರರಿಂದ ಈ ಹಿಂದೆ ಬಹಿರಂಗಪಡಿಸದ ಹೊಸ ಮಾಹಿತಿಯು ಬ್ಯಾಂಕಿನ ಗಮನಕ್ಕೆ ಬಂದಿಲ್ಲದ ಹೊರತು).

**ಗ್ರಾಹಕರೊಂದಿಗೆ ಪಾರದರ್ಶಕ ಮತ್ತು ಪ್ರಾಮಾಣಿಕ ವ್ಯವಹಾರ**

ಬ್ಯಾಂಕ್ ತನ್ನ ಜಾಹೀರಾತು ಮತ್ತು ಪ್ರಚಾರದ ಪ್ರಕಟಣೆಗಳು ಸ್ಪಷ್ಟವಾಗಿದೆ ಮತ್ತು ದಾರಿತಪ್ಪಿಸದಂತಿದೆ ಎಂದು ಗಮನಿಸತಕ್ಕದ್ದು. ಗ್ರಾಹಕರಿಗೆ ತನ್ನ ಉತ್ಪನ್ನಗಳು ಮತ್ತು ಸೇವೆಗಳು, ನಿಯಮಗಳು ಮತ್ತು ಷರತ್ತುಗಳು ಮತ್ತು ಬಡ್ಡಿದರಗಳು/ ಶುಲ್ಕಗಳ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಲಾಗಿದೆ ಎಂದು ಬ್ಯಾಂಕ್ ಖಚಿತಪಡಿಸಿಕೊಳ್ಳತಕ್ಕದ್ದು. ಗ್ರಾಹಕರಿಗೆ ನೀಡಲಾಗುವ ಸೌಲಭ್ಯಗಳು ಮತ್ತು ಗ್ರಾಹಕರು ಇವುಗಳನ್ನು ಪಡೆದುಕೊಳ್ಳಬಹುದಾದ ರೀತಿ ಮತ್ತು ಅವರ ಸಂದೇಹಗಳ ಪರಿಹಾರಕ್ಕಾಗಿ ಯಾರನ್ನು ಮತ್ತು ಹೇಗೆ ಸಂಪರ್ಕಿಸಬಹುದು ಎಂಬ ಮಾಹಿತಿಯನ್ನು ಬ್ಯಾಂಕ್ ಒದಗಿಸತಕ್ಕದ್ದು.

**ಸಾಲಗಳ ವಿತರಣೆ**

ಅನ್ವಯವಾಗುವ ನಿಯಮಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಮಂಜೂರಾದ ಸಾಲಗಳ ಸಕಾಲಿಕ ವಿತರಣೆಯನ್ನು ಬ್ಯಾಂಕ್ ಖಚಿತಪಡಿಸತಕ್ಕದ್ದು. ಬಡ್ಡಿ ದರಗಳು ಮತ್ತು ಅಂತಹ ಇತರ ಸೇವಾ ಶುಲ್ಕಗಳು ಸೇರಿದಂತೆ, ಅದೂ ನಿರೀಕ್ಷಿತವಾಗಿ ಮಾತ್ರ ಪರಿಣಾಮ ಬೀರಬಹುದಾದವುಗಳು, ನಿಯಮಗಳು ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆಯ ಸೂಚನೆಯನ್ನು ಬ್ಯಾಂಕ್ ನೀಡತಕ್ಕದ್ದು.

ಸಾಲಗಾರನು ಎದುರಿಸುವ ಯಾವುದೇ ನಿಜವಾದ ತೊಂದರೆಗಳನ್ನು ನೋಡಿಕೊಳ್ಳಲು ಬ್ಯಾಂಕ್ ವಿಶೇಷವಾಗಿ ರೂ 2 ಲಕ್ಷಗಳವರೆಗಿನ ಸಾಲಗಳಿಗೆ ಸಂಬಂಧಿಸಿದಂತೆ ಸೃಜನಾತ್ಮಕವಾದ ವಿತರಣಾನಂತರದ ಮೇಲ್ವಿಚಾರಣೆಯ ಕಾರ್ಯವಿಧಾನವನ್ನು ಹೊಂದಿರತಕ್ಕದ್ದು. ಸಾಲದ ದಾಖಲೆಯ ಅಡಿಯಲ್ಲಿ ಅಥವಾ ಕಾರ್ಯಕ್ಷಮತೆಯನ್ನು ಪಾವತಿಯನ್ನು ಮರುಪಡೆಯುವ / ತ್ವರಿತಗೊಳಿಸುವ ಅಥವಾ ಸಾಲಗಾರರಿಗೆ ಸರಿಯಾದ ಸೂಚನೆ ನೀಡಿದ ನಂತರ ಹೆಚ್ಚುವರಿ ಭದ್ರತೆಗಳನ್ನು ಪಡೆಯಲು ಬ್ಯಾಂಕ್ ನಿರ್ಧಾರವನ್ನು ತೆಗೆದುಕೊಳ್ಳತಕ್ಕದ್ದು. ಬಾಕಿ ವಸೂಲಾತಿ ಮತ್ತು

ಭದ್ರತೆಗಳನ್ನು ಪುನರ್ವಶ ಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ನ್ಯಾಯಯುತ ಅಭ್ಯಾಸಗಳನ್ನು ಅನುಸರಿಸುವುದನ್ನು ಬ್ಯಾಂಕ್ ವಿಶ್ವಸಿಸುತ್ತದೆ, ಇದರಿಂದಾಗಿ ಗ್ರಾಹಕರ ವಿಶ್ವಾಸ ಮತ್ತು ದೀರ್ಘಾವಧಿಯ ಸಂಬಂಧವನ್ನು ಉತ್ತೇಜಿಸುತ್ತದೆ ಮತ್ತು ಆ ಮೂಲಕ ಬಾಕಿಗಳನ್ನು ಸಂಗ್ರಹಿಸುವಾಗ ಯಾವುದೇ ದಬ್ಬಾಳಿಕೆಯ ವಿಧಾನಗಳನ್ನು ಅನುಸರಿಸುವುದಿಲ್ಲ ಎಂದು ಖಚಿತಪಡಿಸುತ್ತದೆ.

**ಸಾಲಗಳಿಗೆ ಸಂಬಂಧಿಸಿದಂತೆ ಶುಲ್ಕಗಳು ಮತ್ತು ಶುಲ್ಕಗಳು**

ಮಂಜೂರಾತಿ ಪತ್ರ/ಸಾಲದ ಒಪ್ಪಂದದಲ್ಲಿ, ಬ್ಯಾಂಕ್, ಸಾಲದ ಅರ್ಜಿಯನ್ನು ಪ್ರಕ್ರಿಯೆಗೊಳಿಸಲು ಪಾವತಿಸಬೇಕಾದ ವೆಚ್ಚಗಳು / ಶುಲ್ಕಗಳು, ಸಾಲದ ಮೊತ್ತವನ್ನು ಮಂಜೂರು ಮಾಡದಿದ್ದಲ್ಲಿ / ವಿತರಿಸದಿದ್ದಲ್ಲಿ ವೆಚ್ಚಗಳು / ಶುಲ್ಕಗಳ ಮೊತ್ತದ ಮರುಪಾವತಿ ಮಾಡಲಾಗುವುದರ ಕುರಿತು, ಪೂರ್ವ-ಪಾವತಿ ಆಯ್ಕೆಗಳು ಮತ್ತು ಶುಲ್ಕಗಳು, ಯಾವುದಾದರೂ ಇದ್ದಲ್ಲಿ, ವಿಳಂಬ ಮರುಪಾವತಿಗೆ ದಂಡಗಳು, ಯಾವುದಾದರೂ ಇದ್ದಲ್ಲಿ, ಯಾವುದೇ ಬಡ್ಡಿ ಮರುಹೊಂದಿಸುವ ಷರತ್ತು ಮತ್ತು ಸಾಲಗಾರನ ಬಡ್ಡಿಯ ಮೇಲೆ ಪರಿಣಾಮ ಬೀರುವ ಯಾವುದೇ ಇತರ ವಿಷಯಗಳಿದ್ದಲ್ಲಿ ಅವುಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಬಹಿರಂಗಪಡಿಸಬೇಕು.

ಎಲ್ಲಾ ವಿಭಾಗದ ಸಾಲದ ಉತ್ಪನ್ನಗಳಿಗೆ ವೆಬ್‌ಸೈಟ್‌ನಲ್ಲಿ ಬಡ್ಡಿದರಗಳು, ಸೇವಾ ಶುಲ್ಕಗಳು ಮತ್ತು ಇತರ ಶುಲ್ಕಗಳ ಮಾಹಿತಿಯನ್ನು ಬ್ಯಾಂಕ್ ಪ್ರದರ್ಶಿಸತಕ್ಕದ್ದು. ಬ್ಯಾಂಕಿನ ಶಾಖೆಗಳು ಶುಲ್ಕಗಳ ಪಟ್ಟಿಯ ನಕಲನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಲಭ್ಯತೆಯನ್ನು ಸಮಗ್ರ ಸೂಚನಾ ಫಲಕದಲ್ಲಿ ಸೂಚನೆಯ ರೀತಿಯಲ್ಲಿ ಪ್ರದರ್ಶಿಸತಕ್ಕದ್ದು.

ಇತರ ಹಣಕಾಸು ಮೂಲಗಳೊಂದಿಗೆ ದರಗಳ ಶುಲ್ಕಗಳನ್ನು ಹೋಲಿಸುವಲ್ಲಿ ಗ್ರಾಹಕರಿಗೆ ಅನುವು ಮಾಡಿಕೊಡಲು ಬ್ಯಾಂಕ್ 'ಆಲ್-ಇನ್-ಕಾಸ್ಟ್' ಅನ್ನು ತಿಳಿಸತಕ್ಕದ್ದು. ಅಂತಹ ದರಗಳು/ಶುಲ್ಕಗಳು ತಾರತಮ್ಯರಹಿತವಾಗಿವೆ ಎಂದು ಬ್ಯಾಂಕ್ ಖಚಿತಪಡಿಸತಕ್ಕದ್ದು. ಬ್ಯಾಂಕ್ ತನ್ನ ಸಾಲ ಉತ್ಪನ್ನಗಳ ಮೇಲಿನ ಬಡ್ಡಿದರಗಳಲ್ಲಿನ ಬದಲಾವಣೆಗಳನ್ನು ಪತ್ರ, ಇಮೇಲ್ ಅಥವಾ SMS ನಂತಹ ವಿಧಾನಗಳ ಮೂಲಕ ತನ್ನ ಗ್ರಾಹಕರಿಗೆ ತಿಳಿಸತಕ್ಕದ್ದು.

**ಇತರ ಬ್ಯಾಂಕುಗಳಿಂದ ಸಾಲಗಳ ಸ್ವಾಧೀನ**

ಇತರ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳಿಂದ ಸ್ವಾಧೀನಕ್ಕೆ ತೆಗೆದುಕೊಳ್ಳಲ್ಪಟ್ಟ ಸಾಲ ಖಾತೆಗಳ ವಿಷಯದಲ್ಲಿ ಯಾವುದೇ ಆಕ್ಷೇಪವಿದ್ದಲ್ಲಿ, ಕೋರಿಕೆಯ ದಿನಾಂಕದಿಂದ 21 ದಿನಗಳೊಳಗೆ, ಅದನ್ನು ಬ್ಯಾಂಕ್ ತಿಳಿಸುತ್ತದೆ.

**ಸಾಲಗಳ ವಾಪಸಾತಿ**

ಸಾಲಗಳ ವಾಪಸಾತಿಯ ವಿಷಯದಲ್ಲಿ ಬ್ಯಾಂಕ್ ಯಾವುದೇ ಅಹಿತಕರ ದೌರ್ಜನ್ಯಕ್ಕೆ, ಅಂದರೆ, ಅವೇಳೆಗಳಲ್ಲಿ ಸಾಲಗಾರರು ಬಂದು ನಿರಂತರವಾಗಿ ಕಾಟ ಕೊಡುವುದು, ಸಾಲಗಳ ವಾಪಸಾತಿಗೆ ದೈಹಿಕ ಶಕ್ತಿ ಬಳಸುವುದು ಇತ್ಯಾದಿಗಳನ್ನು ಮಾಡುವುದಿಲ್ಲ. ಸಾಲಗಾರರಿಗೆ ಲಿಖಿತ ರೂಪದಲ್ಲಿ ಸೂಕ್ತ ಸೂಚನೆ ನೀಡದೆ ಬ್ಯಾಂಕ್ ಭದ್ರತೆಗಳ ಮರುಸ್ವಾಧೀನ ಒಳಗೊಂಡಂತೆ, ಯಾವುದೇ ಕಾನೂನಾತ್ಮಕ ವಾಪಸಾತಿ ಕ್ರಮಗಳನ್ನು ಕೈಗೊಳ್ಳುವುದಿಲ್ಲ.

ವಾಪಸಾತಿಗೆ ಬ್ಯಾಂಕ್‌ನ ದೃಷ್ಟಿಕೋನವು ವಾಸ್ತವ ಹಾಗೂ ಪೂರ್ವಗ್ರಹರಹಿತವಾಗಿರುತ್ತದೆ. ನ್ಯಾಯಯುತವಾದ ನಡವಳಿಕೆ ಮತ್ತು ಅನುನಯ ವಾಪಸಾತಿ ತಂತ್ರದ ಮೂಲ ನಿಯಮಗಳಾಗಿರುತ್ತವೆ. ಪುನರ್ರಚನೆ/ಪುನಶ್ಚೇತನವು

ವಿಫಲವಾಗಿದ್ದರೆ ಅಥವಾ ಅಸಾಧ್ಯವಾಗಿದ್ದರೆ ಮಾತ್ರ ಭದ್ರತೆಗಳ ಜಾರಿ ಅನುಷ್ಠಾನಕ್ಕೆ ಬರುತ್ತದೆ. ಭದ್ರತೆಗಳ ವಾಪಸಾತಿ/ಮರುಸ್ವಾಧೀನಕ್ಕೆ ಕಾನೂನಿನಡಿ ಅಗತ್ಯಕಂಡಂತೆ, ಬ್ಯಾಂಕ್ ಎಲ್ಲಾ ಕ್ರಮಗಳನ್ನೂ ಪಾಲಿಸುತ್ತದೆ.

ಸಾಲಗಳ ವಾಪಸಾತಿಗೆ ಕುರಿತಾದ ನ್ಯಾಯಯುತವಾದ ಪದ್ಧತಿಗಳನ್ನು ವೆಬ್‌ಸೈಟ್‌ನಲ್ಲಿರುವ "ಬಾಕಿಗಳ ಸಂಗ್ರಹಣೆ ಮತ್ತು ಭದ್ರತೆಗಳ ಮರುಸ್ವಾಧೀನ("Collection of Dues and Repossession of Securities")ನೀತಿಯಡಿ ವಿವರವಾಗಿ ತಿಳಿಸಲಾಗಿದೆ.

**ಫ್ಲೋಟಿಂಗ್ ರೇಟ್ ಸಾಲಗಳ ಮೇಲೆ ಮುನ್ನತೀರುವಳಿ ಶುಲ್ಕಗಳು(ಫೋರ್‌ಕ್ಲೋಶರ್ ಚಾರ್ಜಸ್)/ಪೂರ್ವ–ಪಾವತಿ ದಂಡ**

ಜೂನ್ 5,2012 ದಿನಾಂಕದ ಆರ್‌ಬಿಐ ಸುತ್ತೋಲೆ DBOD.No.Dir.BC.107/13.03.00/2011-12 ಮತ್ತು ಮೇ 7, 2014 ದಿನಾಂಕದ DBOD.Dir.BC.No.110/13.03.00/2013-14ದ ಉಲ್ಲೇಖದಲ್ಲಿ, ಬ್ಯಾಂಕ್ ವ್ಯಾಪಾರ ಉದ್ದೇಶಗಳಿಗೆ ಹೊರತುಪಡಿಸಿದರೆ, ಸಹ–ಬಾಧ್ಯಸ್ಥ(ರು)ರೊಂದಿಗೆ ಅಥವಾ ಇಲ್ಲದೆ ವೈಯಕ್ತಿಕ ವ್ಯಕ್ತಿಗಳಿಗೆ ಅನುಮೋದಿಸಿದ ಯಾವುದೇ ಫ್ಲೋಟಿಂಗ್ ರೇಟ್ ಸಾಲಗಳ ಮೇಲೆ ಮುನ್ನತೀರುವಳಿ ಶುಲ್ಕಗಳು(ಫೋರ್‌ಕ್ಲೋಶರ್ ಚಾರ್ಜಸ್)/ಪೂರ್ವ–ಪಾವತಿ ದಂಡ ವಿಧಿಸುವುದಿಲ್ಲ.

**ಸಾಲಗಳ ತೀರುವಳಿಯ ಬಳಿಕ ಭದ್ರತೆಗಳ (ಭದ್ರತಾ ದಾಖಲೆಗಳು/ಪತ್ರಗಳು)ಮರುಮಾರಾಟ**

ಸಾಲಗಾರರ ವಿರುದ್ಧ ಬ್ಯಾಂಕಿಗೆ ಇರುವ ಯಾವುದೇ ಇತರ ಕ್ಲೇಮಿನ ಯಾವುದೇ ಕಾನೂನುಬದ್ಧ ಹಕ್ಕು ಅಥವಾ ಸ್ವಾಧ್ಯತೆಗೆ ಒಳಪಟ್ಟು, ಸಾಲದ ಮರುಪಾವತಿ ಅಥವಾ ಸಾಲತೀರುವಳಿಯ ಸಂದರ್ಭದಲ್ಲಿ ಬ್ಯಾಂಕ್ ಎಲ್ಲಾ ಭದ್ರತೆಗಳನ್ನು ಬಿಡುಗಡೆ ಮಾಡುತ್ತದೆ. ಗ್ರಾಹಕರ ವಿರುದ್ಧ ಬ್ಯಾಂಕಿಗೆ ಇರುವ ಯಾವುದೇ ಇತರ ಕ್ಲೇಮಿನ ಯಾವುದೇ ಕಾನೂನುಬದ್ಧ ಹಕ್ಕು ಅಥವಾ ಸ್ವಾಧ್ಯತೆಗೆ ಒಳಪಟ್ಟು, ಒಪ್ಪಂದ ಮಾಡಿಕೊಂಡ ಅಥವಾ ಒಪ್ಪಿಕೊಂಡ ಎಲ್ಲಾ ಬಾಕಿಗಳ ಮರುಪಾವತಿಯಾದ 15 ದಿನಗಳೊಳಗೆ ಬ್ಯಾಂಕ್ ತನ್ನ ಗ್ರಾಹಕರ ಎಲ್ಲಾ ಭದ್ರತೆಗಳು/ದಾಖಲೆಗಳು/ಅಡಮಾನ ಮಾಡಿದ ಸ್ವತ್ತಿನ ಹಕ್ಕುಪತ್ರಗಳನ್ನು ಅವರಿಗೆ ಹಿಂದಿರುಗಿಸುತ್ತದೆ. ಸೆಟ್ ಆಫ್ ಮಾಡುವ ಹಕ್ಕನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಬ್ಯಾಂಕ್ ಸಾಲಗಾರರಿಗೆ ಸೂಚನೆ ಕಳುಹಿಸುತ್ತದೆ. ಆ ಸೂಚನೆಯು, ತತ್ಸಂಬಂಧಿತ ಕ್ಲೇಮು ಇತ್ಯರ್ಥಗೊಳ್ಳುವವರೆಗೆ/ಪಾವತಿಸಲ್ಪಡುವವರೆಗೆ, ಭದ್ರತೆಗಳನ್ನು ಹಿಡಿದಿಟ್ಟುಕೊಳ್ಳುವ ಬ್ಯಾಂಕ್‌ನ ಹಕ್ಕಿನಡಿ ಬರುವ ಕ್ಲೇಮುಗಳು ಮತ್ತು ದಾಖಲೆಗಳ ಪೂರ್ಣವಿವರಗಳನ್ನು ಒಳಗೊಂಡಿರುತ್ತದೆ.

**ಗ್ರಾಹಕ ಕುಂದುಕೊರತೆಗಳ ಪರಿಹಾರ**

ಬ್ಯಾಂಕ್, ಸಾಲಗಾರರ ಕುಂದುಕೊರತೆಗಳ ಪರಿಹಾರದ ತಂತ್ರವನ್ನು ಸ್ಥಾಪಿಸಿದ್ದು ಇದು ವೆಬ್‌ಸೈಟ್‌ನಲ್ಲಿರುವ ಗ್ರಾಹಕ ಕುಂದುಕೊರತೆ ಪರಿಹಾರಗಳ ನೀತಿಯಲ್ಲಿ ವಿವರವಾಗಿ ತಿಳಿಸಲ್ಪಟ್ಟಿದೆ ಅಥವಾ ಬ್ಯಾಂಕ್‌ನ ಶಾಖೆಗಳಲ್ಲಿ ಲಭ್ಯವಿರುತ್ತದೆ.

ಸಾಲಿಗರಿಗೆ(ಲೆಂಡರ್ಸ್) ನ್ಯಾಯಯುತ ಪದ್ಧತಿಗಳ ಸಂಹಿತೆ(ಎಫ್‌ಪಿಸಿ) ಮತ್ತು ಕುಂದುಕೊರತೆಗಳ ಪರಿಹಾರ ತಂತ್ರದ ಕಾರ್ಯಾಚರಣೆಯ ಅನುಸರಣೆಯ ವಾರ್ಷಿಕ ಪರಿಶೀಲನೆಯನ್ನು ಬ್ಯಾಂಕ್‌ನ ಗ್ರಾಹಕ ಸೇವಾಸಮಿತಿಯ ಮಂಡಳಿಗೆ ಸಲ್ಲಿಸಲಾಗುತ್ತದೆ.

**ಮಾಸ್ಟರ್ ಡೈರೆಕ್ಷನ್–ರೆಗ್ಯುಲೇಟರಿ ಫ್ರೇಂವರ್ಕ್ ಮೈಕ್ರೋಫೈನಾನ್ಸ್ ಲೋನ್ಸ್(ಮೈಕ್ರೋಫೈನಾನ್ಸ್ ಸಾಲಗಳ ನಿಯಂತ್ರಣ ಕಾರ್ಯಚೌಕಟ್ಟಿನ ಪ್ರಧಾನ ನಿರ್ದೇಶನ) ಮಾರ್ಚ್ 14, 2022**

ಮೇಲೆ ತಿಳಿಸಿದ ಪ್ರಧಾನ ನಿರ್ದೇಶನದ ಪ್ರಕಾರ, ಮೈಕ್ರೋಫೈನಾನ್ಸ್ ಎಂದರೆ, ವಾರ್ಷಿಕ ಗೃಹ ಆದಾಯ ರೂ. 300000ದವರೆಗೆ ಇರುವ ಮನೆಗೆ ಭದ್ರತೆ ಇಲ್ಲದೆ ನೀಡುವ ಸಾಲ. ಪ್ರಧಾನ ನಿರ್ದೇಶನವು ಬ್ಯಾಂಕ್‌ಗಾಗಿ ಈ ಕೆಳಕಂಡ ಅನುಸರಣಾ ಅಗತ್ಯಗಳನ್ನು ಕಲ್ಪಿಸಿದೆ:

1. ಸಂಭಾವ್ಯ ಸಾಲಗಾರರಿಗೆ, ದರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಬ್ಯಾಂಕ್ ಒಂದು ಸಾಮಾನ್ಯವಾಗಿ ಸರಳವಾದ ವಾಸ್ತವಾಂಶ ಹಾಳೆಯಲ್ಲಿ ಬಹಿರಂಗಗೊಳಿಸಬೇಕು. ಮಾದರಿ ವಾಸ್ತವಾಂಶ ಹಾಳೆಗಾಗಿ ಅನುಬಂಧ 1 ನೋಡಿ.

2. ಬ್ಯಾಂಕ್ ಮತ್ತು/ಅಥವಾ ಅದರ ಭಾಗೀದಾರರು/ಏಜೆಂಟ್, ಮೈಕ್ರೋಫೈನಾನ್ಸ್ ಸಾಲಗಾರರಿಗೆ ವಿಧಿಸುವ ಯಾವುದೇ ಶುಲ್ಕವನ್ನು ವಾಸ್ತವಾಂಶ ಹಾಳೆಯಲ್ಲಿ ಸುಸ್ಪಷ್ಟವಾಗಿ ಸೂಚಿಸಿರಬೇಕು. ವಾಸ್ತವಾಂಶ ಹಾಳೆಯಲ್ಲಿ ನಿರ್ದಿಷ್ಟವಾಗಿ ತಿಳಿಸಲಾಗಿರದ ಯಾವುದೇ ಮೊತ್ತವನ್ನು ಬ್ಯಾಂಕ್ ವಿಧಿಸುವಂತಿಲ್ಲ.

3. ಮೈಕ್ರೋಫೈನಾನ್ಸ್ ಸಾಲಗಳ ಮೇಲೆ ಯಾವುದೇ ಪೂರ್ವ–ಪಾವತಿ ದಂಡ ಇರಬಾರದು. ಒಂದು ತಡವಾದ ಪಾವತಿಯ ಮೇಲೆ ಯಾವುದೇ ದಂಡ ವಿಧಿಸುವುದಾದಲ್ಲಿ, ಅದನ್ನು ಬಾಕಿ ಇರುವ ಮೊತ್ತದ ಮೇಲೆ ವಿಧಿಸಬೇಕೇ ಹೊರತು, ಇಡೀ ಸಾಲ ಮೊತ್ತಕ್ಕೆ ವಿಧಿಸಬಾರದು.

4. ಬ್ಯಾಂಕ್, ತನ್ನ ಎಲ್ಲಾ ಕಚೇರಿಗಳಲ್ಲಿ, ಅದು ಹೊರಡಿಸುವ ಲೇಖನಗಳಲ್ಲಿ(ಮಾಹಿತಿ ಕಿರುಹೊತ್ತಗೆಗಳು/ಕರಪತ್ರಗಳು)ಮತ್ತು ತನ್ನ ವೆಬ್‌ಸೈಟ್‌ನಲ್ಲಿ ಕನಿಷ್ಠ, ಗರಿಷ್ಟ ಹಾಗೂ ಸರಾಸರಿ ಬಡ್ಡಿದರಗಳ ಶುಲ್ಕಗಳ ವಿವರಗಳನ್ನು ಪ್ರಧಾನವಾಗಿ ಪ್ರದರ್ಶಿಸಿರಬೇಕು.

5. ಬಡ್ಡಿದರ ಅಥವಾ ಯಾವುದೇ ಶುಲ್ಕಗಳಲ್ಲಿ ಯಾವುದೇ ಬದಲಾವಣೆಯಾದ ಸಂದರ್ಭದಲ್ಲಿ ಬ್ಯಾಂಕ್ ಅದನ್ನು ಸಾಕಷ್ಟು ಮುಂಚಿತವಾಗಿಯೇ ಸಾಲಗಾರರಿಗೆ ತಿಳಿಸಬೇಕು ಮತ್ತು ಈ ಬದಲಾವಣೆಗಳು ಸಂಭಾವ್ಯವಾಗಿ ಜಾರಿಗೊಳ್ಳುವಂತಿರಬೇಕು

6. ಮೈಕ್ರೋಫೈನಾನ್ಸ್ ಸಾಲಗಳ ಸಾಲ ಒಪ್ಪಂದದ ಸಾಮಾನ್ಯ ನಮೂನೆಯು, ಸಾಲಗಾರರು ಅರ್ಥಮಾಡಿಕೊಳ್ಳುವ ಭಾಷೆಯಲ್ಲಿರಬೇಕು.

7. ನೋಡಲ್ ಅಧಿಕಾರಿಯ ಹೆಸರು ಮತ್ತು ಸಂಪರ್ಕ ಸಂಖ್ಯೆ ಒಳಗೊಂಡಂತೆ, ಎಲ್ಲಾ ವಿವರಗಳು ಇರುವ ಸಾಲ ಕಾರ್ಡನ್ನು ಬ್ಯಾಂಕ್ ಸಾಲಗಾರರಿಗೆ ಒದಗಿಸಬೇಕು ಮತ್ತು ಸಾಲ ಕಾರ್ಡಿನ ಎಲ್ಲಾ ನಮೂದನೆಗಳು(ಎಂಟ್ರಿಗಳು), ಸಾಲಗಾರರನ್ನು ಸೂಕ್ತವಾಗಿ ಗುರುತಿಸುವ, ದರಗಳ ಸರಳ ವಾಸ್ತವಾಂಶ ಹಾಳೆ, ಸಾಲಕ್ಕೆ ಸಂಬಂಧಿಸಿದ ಎಲ್ಲಾ ಇತರ ಷರತ್ತು ಹಾಗೂ ನಿಬಂಧನೆಗಳು, ಸ್ವೀಕರಿಸಿದ ಕಂತುಗಳು ಒಳಗೊಂಡಂತೆ, ಎಲ್ಲಾ ಮರುಪಾವತಿಗಳಿಗೆ ಬ್ಯಾಂಕ್‌ನ ಸ್ವೀಕೃತಿದೃಢತೆ, ಮತ್ತು ನೋಡಲ್ ಅಧಿಕಾರಿಯ ಹೆಸರು ಮತ್ತು ಅಚಿತಿಮ ಬಾಕಿ ಹಾಗೂ ಸಂಪರ್ಕ ಸಂಖ್ಯೆ ಒಳಗೊಂಡಂತೆ ಕುಂದುಕೊರತೆಗಳ ಪರಿಹಾರ ವ್ಯವಸ್ಥೆಯ ವಿವರಗಳುಳ್ಳ ಮಾಹಿತಿಯನ್ನು ಹೊಂದಿರಬೇಕು.

8. ಸಾಲ ಕಾರ್ಡಿನ ಎಲ್ಲಾ ಎಂಟ್ರಿಗಳೂ ಸಾಲಗಾರರಿಗೆ ಅರ್ಥವಾಗುವ ಭಾಷೆಯಲ್ಲಿರಬೇಕು.

9. ಸಾಲೇತರ ಉತ್ಪನ್ನಗಳ (ನಾನ್–ಕ್ರೆಡಿಟ್ ಪ್ರಾಡಕ್ಟ್ಸ್) ನೀಡಿಕೆಯು, ಸಾಲಗಾರರ ಸಂಪೂರ್ಣ ಅನುಮತಿಯೊಂದಿಗೆ ನೀಡಿರಬೇಕು ಮತ್ತು ಇಂತಹ ಉತ್ಪನ್ನಗಳ ಶುಲ್ಕ ರಚನೆಯನ್ನು ಸಾಲ ಕಾರ್ಡಿನಲ್ಲೇ ಅತಿಸ್ಪಷ್ಟವಾಗಿ ಸಾಲಗಾರರಿಗೆ ತಿಳಿಸಿರಬೇಕು.

10. ತನ್ನ ಉದ್ಯೋಗಿಗಳು ಅಥವಾ ಹೊರಗುತ್ತಿಗೆಯ ಏಜೆನ್ಸಿಯ ಉದ್ಯೋಗಿಗಳಿಂದ ಏರ್ಪಡುವ ಅಸಮರ್ಪಕ ನಡವಳಿಕೆಗಳಿಗೆ ಬ್ಯಾಂಕ್ ಬಾಧ್ಯಸ್ಥನಾಗಿದ್ದು ಸೂಕ್ತವಾದ ಸಮಯದಲ್ಲಿ ಕುಂದುಕೊರತೆಗಳ ಪರಿಹಾರ ಒದಗಿಸಬೇಕು ಮತ್ತು ಇದನ್ನು ಸಾಲ ಒಪ್ಪಂದದಲ್ಲಿ ಹಾಗೂ ವೆಬ್‌ಸೈಟ್/ಶಾಖೆಯ ಆವರಣ/ಕಚೇರಿಯಲ್ಲಿ ಪ್ರದರ್ಶಿಸಿರಬೇಕು.

11. ಸಾಲ ವಾಪಸಾತಿಗಳ ಕುರಿತಾದ ಮಾರ್ಗಸೂಚಿಗಳನ್ನು ಬ್ಯಾಂಕ್‌ನ ಸಂಗ್ರಹ ನೀತಿಯಲ್ಲಿ(ಕಲೆಕ್ಷನ್ ಪಾಲಿಸಿ)ಸೂಕ್ತವಾಗಿ ನಮೂದಿಸಿರಬೇಕು.

**ಅನುಬಂಧ 1:**

**ಮೈಕ್ರೋಫೈನಾನ್ಸ್ ಸಾಲಗಳ ದರರಚನೆಯ ಮಾದರಿ ವಾಸ್ತವಾಂಶ ಹಾಳೆ**
(ಸಾಲಗಾರರಿಗೆ ಅರ್ಥವಾಗುವ ಭಾಷೆಯಲ್ಲಿ ಒದಗಿಸಿರಬೇಕು)

**ದಿನಾಂಕ:** XXX **ಸಾಲಿಗರ ಹೆಸರು:** XXX **೦ಅರ್ಜಿದಾರರ ಹೆಸರು:** XXX

| **ಕ್ರ.ಸಂ.** | **ಮಾನದಂಡ** | **ವಿವರಗಳು** |
|---|---|---|
| (i) | ಸಾಲದ ಮೊತ್ತ(ಸಾಲಾಗಾರರಿಗೆ ವಿತರಿಸಲಾದ ಮೊತ್ತ(ರೂಪಾಯಿಗಳಲ್ಲಿ) | |
| (ii) | ಸಾಲದ ಇಡೀ ಅವಧಿಗೆ ವಿಧಿಸಲಾದ ಒಟ್ಟೂ ಬಡ್ಡಿದರ(ರೂಪಾಯಿಗಳಲ್ಲಿ) | |
| (iii) | ಇತರ ಅಪ್–ಫ್ರಂಟ್ ಶುಲ್ಕಗಳು(ಪ್ರತಿಯೊಂದು ಅಂಶದ ಬ್ರೇಕ್‌ಅಪ್‌ಅನ್ನು ಕೆಳಗೆ ಒದಗಿಸಬೇಕು)(ರೂಪಾಯಿಗಳಲ್ಲಿ) | |
| (a) | ಪ್ರಕ್ರಿಯಾ ಶುಲ್ಕಗಳು(ರೂಪಾಯಿಗಳಲ್ಲಿ) | |
| (b) | ವಿಮಾ ಶುಲ್ಕಗಳು(ರೂಪಾಯಿಗಳಲ್ಲಿ) | |
| (c) | ಇತರೆ(ಯಾವುದೇ, ಇದ್ದಲ್ಲಿ)(ರೂಪಾಯಿಗಳಲ್ಲಿ) | |
| (iv) | ವಿತರಿಸಲಾದ ನಿವ್ವಳ ಮೊತ್ತ((i)- (ii) (ರೂಪಾಯಿಗಳಲ್ಲಿ) | |
| (v) | ಸಾಲಗಾರರು ಪಾವತಿಸಬೇಕಾಗಿರುವ ಒಟ್ಟೂ ಮೊತ್ತ ((i), (ii) ಮತ್ತು (iii)ಗಳ ಒಟ್ಟೂ ಮೊತ್ತ) (ರೂಪಾಯಿಗಳಲ್ಲಿ) | |
| (vi) | ಜಾರಿಗೆ ಬರುವ ವಾರ್ಷಿಕೃತ ಬಡ್ಡಿದರ(ಶೇಕಡಾವಾರುವಿನಲ್ಲಿ)(ಐಆರ್‌ಆರ್ ವಿಧಾನ ಮತ್ತು ಕಡಿಮೆಯಾಗುವ ಬಾಕಿ ವಿಧಾನ ಬಳಸಿ ಒಟ್ಟೂ ವಿತರಿಸಲಾದ ಮೊತ್ತದ ಮೇಲೆ ಲೆಕ್ಕಚಾರ ಹಾಕಿದ್ದು) | |
| (vii) | ಸಾಲದ ಅವಧಿ(ತಿಂಗಳುಗಳಲ್ಲಿ) | |
| (viii) | ಸಾಲಗಾರರು ಮರುಪಾವತಿಯ ಪುನರಾವರ್ತನೆ | |
| (ix) | ಮರುಪಾವತಿಯ ಕಂತುಗಳ ಸಂಖ್ಯೆ | |
| (x) | ಮರುಪಾವತಿಯ ಪ್ರತಿಯೊಂದು ಕಂತಿನ ಮೊತ್ತ(ರೂಪಾಯಿಗಳಲ್ಲಿ) | |
| **ಅನಿರೀಕ್ಷಿತ ಶುಲ್ಕಗಳ(ಕಂಟಿಂಜೆಂಟ್ ಚಾರ್ಜಸ್)ವಿವರಗಳು** | | |
| (xi) | ಯಾವುದೇ ಸಮಯದಲ್ಲಾದರೂ ಸಾಲಗಾರರು ಅವಧಿಮುಂಚಿತವಾಗಿ ಮರುಪಾವತಿ ಮಾಡಿದರೆ, ಯಾವುದೇ ದಂಡ ವಿಧಿಸಬಾರದು | |
| (xii) | ತಡವಾದ ಮರುಪಾವತಿಗಳ ಸಂದರ್ಭದಲ್ಲಿ ಮಾತ್ರ ದಂಡ(ಯಾವುದೇ, ಇದ್ದಲ್ಲಿ) | |
| (xiii) | ಇತರ ಶುಲ್ಕಗಳು(ಯಾವುದೇ, ಇದ್ದಲ್ಲಿ) | |

## ಮರುಪಾವತಿ ಶೆಡ್ಯೂಲ್‌ನ ವಿವರಗಳು

| ಕಂತಿನ ಸಂ. | ಬಾಕಿ ಇರುವ ಮೂಲ ಸಾಲ(ಪ್ರಿನ್ಸಿಪಾಲ್)(ರಊಪಾಯಿಗಳಲ್ಲಿ | ಮೂಲ ಸಾಲ(ರೂಪಾಯಿಗಳಲ್ಲಿ) | ಬಡ್ಡಿದರ(ರೂಪಾಯಿಗ ಳಲ್ಲಿ) | ಕಂತು(ರೂಪಾಯಿಗಳಲ್ಲಿ |
|---|---|---|---|---|